**ಕರ್ನಾಟಕ ಸರ್ಕಾರ**
**(ವಿದ್ಯುತ್ ಪರಿವೀಕ್ಷಣಾಲಯ)**

ಸಂ: ಮುವಿಪ/ಅಮುವಿಪ/ವಿಪ(ಪ)/ 1645-1682 /2021-2022

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
2ನೇ ಮಹಡಿ, ನಿರ್ಮಾಣ ಭವನ,
ರಾಜಾಜಿನಗರ 1ನೇ ಬ್ಲಾಕ್,
ಡಾ।ರಾಜ್‌ಕುಮಾರ್ ರಸ್ತೆ,
ಬೆಂಗಳೂರು 560 010.

ದಿನಾಂಕ : 06/12/2021

**ಸುತ್ತೋಲೆ**

ವಿಷಯ:ವಿದ್ಯುತ್ ಗುತ್ತಿಗೆ ಪರವಾನಗಿ ಹೊಸದು/ನವೀಕರಣ ಅರ್ಜಿಗಳ ಜೊತೆ ಸಲ್ಲಿಸುವ ಬ್ಯಾಂಕ್ ಶಕ್ತಿ ಪತ್ರದ ಬಗ್ಗೆ ಹಾಗೂ ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆ ಪರವಾನಗಿ ನವೀಕರಣ ಅರ್ಜಿಗಳ ಜೊತೆ Details of payment of premium to EPF and ESI ಸಲ್ಲಿಸುವ ಬಗ್ಗೆ.

**** **** ****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸೂಪರ್ ಗ್ರೇಡ್/ವರ್ಗ-1/ವರ್ಗ-2 ವಿದ್ಯುತ್ ಗುತ್ತಿಗೆ ಪರವಾನಗಿ ಹೊಸದು ಹಾಗೂ ನವೀಕರಣಕ್ಕೆ ಅರ್ಜಿ ಸಲ್ಲಿಸುವ ಅರ್ಜಿದಾರರು ಅರ್ಜಿಗಳ ಜೊತೆಯಲ್ಲಿ ಸಲ್ಲಿಸಿರುವ ಬ್ಯಾಂಕ್ ಶಕ್ತಿ ಪತ್ರದಲ್ಲಿ **AS ON DATE** ಎಂದು ನಮೂದಿಸಿದಲ್ಲಿ ಸದರಿ ಬ್ಯಾಂಕ್ ಶಕ್ತಿ ಪತ್ರವನ್ನು ಪರಿಗಣಿಸಬೇಕೆಂದು ಮತ್ತು ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆ ಪರವಾನಗಿ ನವೀಕರಣಕ್ಕಾಗಿ ಸಲ್ಲಿಸುವ ಅರ್ಜಿಯ ಜೊತೆ ಗುತ್ತಿಗೆದಾರರು ನೇಮಿಸಿಕೊಂಡಿರುವ **ವಿದ್ಯುತ್ ಮೇಲ್ವಿಚಾರಕರು ಹಾಗೂ ವಿದ್ಯುತ್ ತಂತಿ ಕೆಲಸಗಾರರ ಹೆಸರಿಗೆ ಇಎಸ್‌ಐ ಹಾಗೂ ಇಪಿಎಫ್ ಪಾವತಿಸಿರುವ ಚಲನ್ ಪ್ರತಿಗಳನ್ನು** ಕಡ್ಡಾಯವಾಗಿ ಸಲ್ಲಿಸಬೇಕೆಂದು ದಿನಾಂಕ:29.11.2021 ರಂದು ನಡೆದ 103ನೇ ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳು ವಿದ್ಯುತ್ ಗುತ್ತಿಗೆದಾರರ ಅರ್ಜಿದಾರರು ಸಲ್ಲಿಸಿರುವ ಬ್ಯಾಂಕ್ ಶಕ್ತಿ ಪತ್ರದಲ್ಲಿ **AS ON DATE** ಎಂದು ನಮೂದಿಸಿದ್ದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲು ಹಾಗೂ ಸೂಪರ್ ಗ್ರೇಡ್ ವಿದ್ಯುತ್ ಗುತ್ತಿಗೆ ಪರವಾನಗಿ ನವೀಕರಣ ಅರ್ಜಿಯ ಜೊತೆ ಗುತ್ತಿಗೆದಾರರು ನೇಮಿಸಿಕೊಂಡಿರುವ **ವಿದ್ಯುತ್ ಮೇಲ್ವಿಚಾರಕರು ಹಾಗೂ ವಿದ್ಯುತ್ ತಂತಿ ಕೆಲಸಗಾರರ ಹೆಸರಿಗೆ ಇಎಸ್‌ಐ ಹಾಗೂ ಇಪಿಎಫ್ ಪಾವತಿಸಿರುವ ಚಲನ್ ಪ್ರತಿಗಳನ್ನು** ಸಲ್ಲಿಸಿರುವ ಅರ್ಜಿಗಳನ್ನು ಮಾತ್ರ ಕೇಂದ್ರ ಕಛೇರಿಗೆ ರವಾನಿಸುವಂತೆ ಈ ಮೂಲಕ ತಿಳಿಸಲಾಗಿದೆ.

6/12/2021

ಮುಖ್ಯ ವಿದ್ಯುತ್ ಪರಿವೀಕ್ಷಕರು (ಪ್ರಭಾರ)

ಸರ್ಕಾರದ ಮುಖ್ಯ ವಿದ್ಯುತ್ ಪರಿವೀಕ್ಷಕರು,
ವಿದ್ಯುತ್ ಪರಿವೀಕ್ಷಣಾಲಯ,
ಬೆಂಗಳೂರು.

**ಪ್ರತಿಯನ್ನು:**

1. ಎಲ್ಲಾ ಉಪ ವಿದ್ಯುತ್ ಪರಿವೀಕ್ಷಕರುಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
2. ಕ.ಕ/ಮು.ಕ.

Scanned with CamScanner